ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 06–01–2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ:<br><br>ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. | 07-01-2016<br>ಗುರುವಾರ<br>ಬೆಳಿಗ್ಗೆ<br>9–45 ಗಂಟೆಗೆ | ಮೀಡಿಯಾ ಲಾಂಜ್ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ, ರಾಷ್ಟ್ರೀಯ ಹೆದ್ದಾರಿ – 4, ತುಮಕೂರು ರಸ್ತೆ, ಬೆಂಗಳೂರು. |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ರಾಜ್ಯ ವಿಧಾನ ಪರಿಷತ್‌ಗೆ ಆಯ್ಕೆಗೊಂಡ ನೂತನ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

**ಬೆಂಗಳೂರು, ಜನವರಿ 6, 2016 (ಕರ್ನಾಟಕ ವಾರ್ತೆ)**

ರಾಜ್ಯ ವಿಧಾನ ಪರಿಷತ್‌ಗೆ ಇತ್ತೀಚೆಗೆ ಆಯ್ಕೆಗೊಂಡ 25 ನೂತನ ಸದಸ್ಯರ ಪೈಕಿ 24 ಸದಸ್ಯರು ವಿಧಾನ ಸೌಧದ ಔತಣ ಸಭಾಂಗಣದಲ್ಲಿ ಬುಧವಾರ ನಡೆದ ವಿಶೇಷ ಸಮಾರಂಭದಲ್ಲಿ ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯ ವಿಧಾನ ಪರಿಷತ್ ಸಭಾಪತಿ ಡಿ. ಹೆಚ್. ಶಂಕರಮೂರ್ತಿ ಅವರು ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ಕೆಲವು ಸದಸ್ಯರು ಭಗವಂತನ ಹೆಸರಿನಲ್ಲಿ ಹಾಗೂ ಮತ್ತೆ ಕೆಲವು ಸದಸ್ಯರು ಸತ್ಯ ನಿಷ್ಠೆಯ ಹೆಸರಿನಲ್ಲಿ ಒಟ್ಟಾರೆ ಎಲ್ಲಾ ಸದಸ್ಯರು ಕನ್ನಡದಲ್ಲಿಯೇ ಪ್ರಮಾಣ ವಚನ ಸ್ವೀಕರಿಸಿದರು.

ಇಂದು ಪ್ರಮಾಣ ವಚನ ಸ್ವೀಕರಿಸಿದ ಗಣ್ಯರು: ಎಸ್. ಆರ್. ಪಾಟೀಲ್ (ಬಿಜಾಪುರ), ವಿಜಯ್‌ಸಿಂಗ್(ಬೀದರ್), ಬಿ.ಜಿ. ಪಾಟೀಲ್(ಗುಲಬರ್ಗಾ), ಬಸವನಗೌಡ ಆರ್ ಪಾಟೀಲ್

ಯತ್ನಾಳ್(ಬಿಜಾಪುರ), ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ(ಬೆಳಗಾವಿ), ವಿವೇಕ್ ವಸಂತರಾವ್ ಪಾಟೀಲ್(ಬೆಳಗಾವಿ), ಶ್ರೀಕಾಂತ್ ಲಕ್ಷ್ಮಣ ಘೋಟ್ನೇಕರ್(ಉತ್ತರ ಕನ್ನಡ), ಶ್ರೀನಿವಾಸ ಮಾನೆ(ಧಾರವಾಡ), ಪ್ರದೀಶ್ ಶೆಟ್ಟರ್ (ಧಾರವಾಡ), ಬಸವರಾಜ ಪಾಟೀಲ್ ಇಟಗಿ(ರಾಯಚೂರು), ಕೆ.ಸಿ. ಕೊಂಡಯ್ಯ(ಬಳ್ಳಾರಿ), ಆರ್. ಪ್ರಸನ್ನಕುಮಾರ್(ಶಿವಮೊಗ್ಗ), ಕೋಟಾ ಶ್ರೀನಿವಾಸ ಪೂಜಾರಿ(ದಕ್ಷಿಣ ಕನ್ನಡ), ಕೆ. ಪ್ರತಾಪ್ ಚಂದ್ರ ಶೆಟ್ಟಿ(ದಕ್ಷಿಣ ಕನ್ನಡ), ಎಂ.ಕೆ. ಪ್ರಾಣೇಶ್(ಚಿಕ್ಕಮಗಳೂರು), ಎಂ.ಎ. ಗೋಪಾಲಸ್ವಾಮಿ(ಹಾಸನ), ಕಾಂತರಾಜು (ತುಮಕೂರು), ಎನ್. ಅಪ್ಪಾಜಿಗೌಡ(ಮಂಡ್ಯ), ಎಂ. ನಾರಾಯಣಸ್ವಾಮಿ(ಬೆಂಗಳೂರು), ಎಸ್.ರವಿ (ಬೆಂಗಳೂರು ಗ್ರಾಮಾಂತರ), ಸಿ.ಆರ್. ಮನೋಹರ್(ಕೋಲಾರ), ಸುನಿಲ್ ಸುಬ್ರಮಣಿ(ಕೊಡಗು), ಆರ್. ಧರ್ಮಸೇನಾ(ಮೈಸೂರು), ಹಾಗೂ ಎಸ್. ಸಂದೇಶ್ ನಾಗರಾಜ್(ಮೈಸೂರು) ಇವರು ಪ್ರಮಾಣ ವಚನ ಸ್ವೀಕರಿಸಿದ ಶಾಸಕರು. ಅವರು ಅನಿವಾರ್ಯ ಕಾರಣಗಳಿಂದಾಗಿ ಚಿತ್ರದುರ್ಗದ ಶ್ರೀ ಜಿ. ರಘು ಆಚಾರ್ ಅವರು ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಲು ಇಂದು ಸಾಧ್ಯವಾಗಲಿಲ್ಲ.

ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ, ಪ್ರವಾಸೋದ್ಯಮ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಶ್ರೀ ಆರ್. ವಿ. ದೇಶಪಾಂಡೆ, ಉನ್ನತ ಶಿಕ್ಷಣ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ. ಜಯಚಂದ್ರ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್, ಪ್ರತಿಪಕ್ಷ ನಾಯಕ ಜಗದೀಶ್ ಶೆಟ್ಟರ್, ಶಾಸಕ ಕೆ. ಜಿ. ಬೊಪಯ್ಯ, ರಾಜ್ಯ ವಿಧಾನ ಪರಿಷತ್ ಕಾರ್ಯದರ್ಶಿ ವಿ. ಶ್ರೀಶ್ ಅವರೂ ಸೇರಿದಂತೆ ಹಲವು ಗಣ್ಯರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.
ಡಿಪಿಎಂ/ಕೆಎನ್‌ವಿ/ಕೆಎಂ

## ಶಿಕ್ಷಕರ ಕ್ಷೇತ್ರಗಳ ಮತದಾರರ ಪಟ್ಟಿ ಪರಿಷ್ಕರಣೆ

**ಬೆಂಗಳೂರು, ಜನವರಿ 6, 2016 (ಕರ್ನಾಟಕ ವಾರ್ತೆ)**

ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿಯ ಸಂಬಂಧದಲ್ಲಿ 1) ಕರ್ನಾಟಕ ವಾಯುವ್ಯ ಪದವೀಧರ ಕ್ಷೇತ್ರ 2) ಕರ್ನಾಟಕ ದಕ್ಷಿಣ ಪದವೀಧರರ ಕ್ಷೇತ್ರ 3) ಕರ್ನಾಟಕ ವಾಯುವ್ಯ ಶಿಕ್ಷಕರ ಕ್ಷೇತ್ರ 4) ಕರ್ನಾಟಕ ಪಶ್ಚಿಮ ಶಿಕ್ಷಕರ ಕ್ಷೇತ್ರಗಳ ಮತದಾರರ ಪಟ್ಟಿ ಪರಿಷ್ಕರಣೆಯ ಅಂತಿಮ ಪ್ರಕಟಣೆಯ ದಿನಾಂಕ 18-1-2016 ರಂದು ನಿಗದಿಪಡಿಸಿರುತ್ತದೆ. ಮೇಲ್ಕಂಡ ವಿವರಗಳು ವಿವರಗಳು ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಇವರ ಅಂತರ್ಜಾಲ ತಾಣ www.ceokarnataka.kar.nic ರಲ್ಲಿ ಸಹ ಲಭ್ಯವಿರುತ್ತದೆ ಎಂದು ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ. 8 ರ ಬೆಳ್ಳಿಹೆಜ್ಜೆಯಲ್ಲಿ – ಸಾ.ರಾ.ಗೋವಿಂದು

**ಬೆಂಗಳೂರು, ಜನವರಿ 6, 2016 (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಈ ಬಾರಿಯ ಬೆಳ್ಳಿಹೆಜ್ಜೆಯಲ್ಲಿ ಕನ್ನಡ ಚಲನಚಿತ್ರ ರಂಗದ ಹಿರಿಯ ನಿರ್ಮಾಪಕ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರು ಹಾಗೂ ಅಖಿಲ

ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷರೂ ಆದ ಶ್ರೀ ಸಾ. ರಾ. ಗೋವಿಂದು ಪಾಲ್ಗೊಳ್ಳಲಿದ್ದಾರೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಜನವರಿ 8 ರ ಶುಕ್ರವಾರದಂದು ಸಂಜೆ 5-00 ಗಂಟೆಗೆ ಮೈಸೂರು ಜಿಲ್ಲೆ ಕೆ.ಆರ್. ನಗರ ಪಟ್ಟಣದ ಡಾ. ರಾಜ್‌ಕುಮಾರ್ ಸಾಂಸ್ಕೃತಿಕ ಬಾನಂಗಣದಲ್ಲಿ ಹಮ್ಮಿಕೊಂಡಿರುವ ಬೆಳ್ಳಿಹೆಜ್ಜೆ ಕಾರ್ಯಕ್ರಮದಲ್ಲಿ ಕೆ.ಆರ್. ನಗರದ ಶಾಸಕ ಸಾ.ರಾ. ಮಹೇಶ್, ವಿಧಾನ ಪರಿಷತ್ ಸದಸ್ಯರು ಹಾಗೂ ಹಿರಿಯ ಕಲಾವಿದೆ ಡಾ. ಜಯಮಾಲಾ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್, ಈ ಸಂಜೆ ದಿನಪತ್ರಿಕೆ ಸಂಪಾದಕರಾದ ಟಿ. ವೆಂಕಟೇಶ್, ಹಿರಿಯ ಚಲನಚಿತ್ರ ನಿರ್ದೇಶಕ ಎಸ್. ನಾರಾಯಣ್, ಹಿರಿಯ ಕಲಾವಿದ ದೊಡ್ಡಣ್ಣ ಅವರು ಉಪಸ್ಥಿತರಿರುವರು ಎಂದು ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಇಲಾಖಾ ಪರೀಕ್ಷೆ ಫಲಿತಾಂಶ ಪ್ರಕಟ : ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ 6, 2016 (ಕರ್ನಾಟಕ ವಾರ್ತೆ)**

ಆಯೋಗವು ನಡೆಸಿದ 2015 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಫಲಿತಾಂಶವನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ನೋಡಬಹುದಾಗಿರುತ್ತದೆ. ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಅಂಕಗಳ ಮರು-ಎಣಿಕೆಗಾಗಿ ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ನಿಗದಿತ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗೂ ಆಯೋಗವು ನಡೆಸುವ 2016ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಕಪರೀಕ್ಷೆಗಳಿಗೆ ಅರ್ಹ ಸರ್ಕಾರಿ ನೌಕರರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ದಿನಾಂಕ: 4-1-2016 ರಿಂದ 2-2-2016 ರ ವರೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ತತ್ಸಂಬಂದ ಶುಲ್ಕವನ್ನು ಸ್ಕ್ಯಾನರ್ ಸೌಲಭ್ಯವಿರುವ ರಾಜ್ಯದ ಯಾವುದೇ ಗಣಕೀಕೃತ ಅಂಚೆ ಕಚೇರಿ ಶಾಖೆಗಳಲ್ಲಿ ದಿ:3-2-2016 ರ ವರೆಗೆ ಪಾವತಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ಪ್ರಕಟಿಸಿರುವ ಅಧಿಸೂಚನೆಯನ್ನು ನೋಡಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ದೂರವಾಣಿ ಸಂ. 080-30574944/30574945/30574957 ಅನ್ನು ಸಂಪರ್ಕಿಸಲು ಸೂಚಿಸಿದೆ.

ಬಾಬು:ಪಿಎಸ್‌ಐ:ಜಿಪಿಆರ್.

## ಮೈಸೂರಿನಲ್ಲಿ ಕಾವೇರಿ ನದಿ ಗ್ಯಾಲರಿ ಸ್ಥಾಪನೆ-ಆರ್.ವಿ.ದೇಶಪಾಂಡೆ

**ಬೆಂಗಳೂರು, ಜನವರಿ 6, 2016 (ಕರ್ನಾಟಕ ವಾರ್ತೆ)**

ಕಾವೇರಿ ನದಿಯ ಮಹತ್ವ, ಇತಿಹಾಸ, ಪಾವಿತ್ರತೆ, ನದಿಯಿಂದ ಆಗಿರುವ ಲಾಭ, ನದಿಗೆ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಅಪಾಯ.. ಹೀಗೆ ಕಾವೇರಿ ನದಿಯ ಸಮಗ್ರ ಪರಿಚಯವನ್ನು ರಾಜ್ಯದ ಜನತೆಗೆ ಮಾಡಿಕೊಡುವ ನಿಟ್ಟಿನಲ್ಲಿ ಐತಿಹಾಸಿಕ ನಗರಿ ಮೈಸೂರಿನಲ್ಲಿ 'ಕಾವೇರಿ ನದಿ ಗ್ಯಾಲರಿ'ಯನ್ನು ಸ್ಥಾಪಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಆರ್. ವಿ .ದೇಶಪಾಂಡೆ ಅವರು ತಿಳಿಸಿದರು.

ಅವರಿಂದು ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನ್ನಾಡುತ್ತಾ, ಕಾವೇರಿ ನದಿ ಗ್ಯಾಲರಿಯಲ್ಲಿ ಕಲಾ ತಾಂತ್ರಿಕತೆಯನ್ನು ಬಳಸಿಕೊಂಡು ಪ್ರವಾಸಿಗರಿಗೆ, ವಿದ್ಯಾರ್ಥಿಗಳಿಗೆ, ಕಾವೇರಿ ನದಿ ಪಾತ್ರದ ಸಮಗ್ರ ನೈಜ ಚಿತ್ರಣ ಕಟ್ಟಿಕೊಡಲಾಗುವುದು ಎಂದರು.

ನದಿಯ ಉಗಮಸ್ಥಾನದಿಂದ ಹಿಡಿದು ಅದರ ಸಂಪೂರ್ಣ ಪಯಣ, ನದಿಯ ಬಗೆಗಿರುವ ಕಾಲ್ಪನಿಕ ಕಥೆಗಳು, ನದಿಯಿಂದ ಆಗಿರುವ ಲಾಭ, ನದಿ ಪಾತ್ರದ ಜೀವ ವೈವಿಧ್ಯತೆ, ಸಾಮಾಜಿಕ ಆರ್ಥಿಕ ಪ್ರಾಮುಖ್ಯತೆ, ಪ್ರವಾಸೋದ್ಯಮ, ಸಂಸ್ಕೃತಿ, ನದಿಗೆ ಎದುರಾಗಬಹುದಾದ ಅಪಾಯ,ನದಿಯ ಸಂರಕ್ಷಣೆ, ನದಿಯ ಪುನರುಜ್ಜೀವನ, ಸಂಶೋಧನೆ ಮುಂತಾದವುಗಳ ಬಗ್ಗೆ ಅನಿಮೇಶನ್, ಗ್ರಾಫಿಕ್ ತಂತ್ರಜ್ಞಾನ ಪ್ರದರ್ಶನ, ಸಂವಹನ, ಮ್ಯಾಪ್ ಬ್ರೌಸರ್,ಪ್ರವಾಸ ಮುಂತಾದವುಗಳ ಮೂಲಕ ಸಮಗ್ರ ಪರಿಚಯ ನೀಡಲಾಗುವುದು ಎಂದರು.

ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ 2015-16ನೇ ಆಯವ್ಯಯದಲ್ಲಿ ಈ ಕುರಿತು ಘೋಷಣೆ ಮಾಡಿದ್ದು, ಕಾವೇರಿ ನದಿ ಗ್ಯಾಲರಿಗಾಗಿ 3.5 ಕೋಟಿ ರೂಗಳನ್ನು ಮೀಸಲಿರಿಸಿದ್ದಾರೆ ಎಂದ ಸಚಿವರು, ಈ ಸಂಬಂಧ ಕರ್ನಾಟಕ ಪ್ರದರ್ಶನ ಮೈದಾನದಲ್ಲಿ ಶಂಕುಸ್ಥಾಪನೆಯನ್ನೂ ಸಹ ನೆರವೇರಿಸಿದ್ದಾರೆ ಎಂದರು.

ರಾಷ್ಟ್ರೀಯ ವಿಜ್ಞಾನ ಅಕಾಡೆಮಿ, (ಎನ್ಎಎಸ್ಐ)ಸಂಸ್ಥೆಯು ರಾಷ್ಟ್ರೀಯ ವಿಜ್ಞಾನ ಮ್ಯೂಸಿಯಂ ಸಹಯೋಗದಲ್ಲಿ ಯೋಜನೆ ಕೈಗೆತ್ತಿಕೊಂಡು ಕೆಲವೇ ತಿಂಗಳುಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಿದೆ ಎಂದ ಸಚಿವರು, ಇದೇ ಸಂಸ್ಥೆಯು ಮುಂದಿನ 3 ವರ್ಷಗಳ ಅವಧಿಗೆ ಗ್ಯಾಲರಿ ನಿರ್ವಹಣೆ ಮಾಡಲಿದ್ದು, ತದನಂತರ ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನಂತರ ಗ್ಯಾಲರಿ ಹಸ್ತಾಂತರಿಸಲಿದೆ ಎಂದು ವಿವರಿಸಿದರು.

ಎನ್ಎಎಸ್ಐ ಮತ್ತು ಎನ್ಸಿಎಸ್ಎಂ ಸಂಸ್ಥೆಗಳು ಈಗಾಗಲೇ ಗುವಾಹಟಿಯಲ್ಲಿ ಬ್ರಹ್ಮಪುತ್ರ ನದಿ ಗ್ಯಾಲರಿ ಮತ್ತು ಅಲಹಾಬಾದ್‌ನಲ್ಲಿ ಗಂಗಾ ನದಿ ಗ್ಯಾಲರಿ ಯೋಜನೆಯ್ನು ಪೂರ್ಣಗೊಳಿಸಿದ್ದು, ರಾಜ್ಯದಲ್ಲಿ ಕಾವೇರಿ ನದಿ ಗ್ಯಾಲರಿ ಸಂಬಂಧ ಒಡಂಬಡಿಕೆಗೆ ಸಹಿ ಹಾಕಿವೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ವಿಜ್ಞಾನಿ ಕಸ್ತೂರಿರಂಗನ್ ಸೇರಿದಂತೆ ಪ್ರವಾಸೋದ್ಯಮ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.
ಮಮತ

ಸ್ವಾಮಿ ವಿವೇಕಾನಂದರ ಜನ್ಮ ದಿನದ ಅಂಗವಾಗಿ
**ರಾಷ್ಟ್ರೀಯ ಯುವ ಸಪ್ತಾಹದ ವಿಶೇಷ:**

# ಯುವಜನರ ಸ್ಪೂರ್ತಿಯ ನೆಲೆ ಸ್ವಾಮಿ ವಿವೇಕಾನಂದರು

ಸಹಸ್ರಾರು ವರ್ಷಗಳಿಂದ ಭರತ ಭೂಮಿಯಲ್ಲಿ ಬೇರೂರಿದ್ದ ಸೋದರತೆಯ ಸಂದೇಶವನ್ನು ಇಡೀ ವಿಶ್ವಕ್ಕೆ ಪಸರಿಸಿದ ಮಹಾನ್ ಯುವಚೇತನ, ಹಿರಿಯ ದಾರ್ಶನಿಕ, ಅಪ್ರತಿಮ ತತ್ವಜ್ಞಾನಿ ಸ್ವಾಮಿ ವಿವೇಕಾನಂದರ ಜನ್ಮ ದಿನ ಜನವರಿ 12. ರಾಜ್ಯ ಸರ್ಕಾರವು ಸ್ವಾಮಿ ವಿವೇಕಾನಂದರ ಸ್ಮರಣಾರ್ಥ ಜನವರಿ 12 ರಿಂದ ಒಂದು ವಾರಗಳ ಕಾಲ "ರಾಷ್ಟ್ರೀಯ ಯುವ ಸಪ್ತಾಹ" ಆಚರಣೆಗೆ ಆದೇಶವನ್ನು ಹೊರಡಿಸಿದೆ. ಈ ನಿಟ್ಟಿನಲ್ಲಿ ಆ ಮಹಾನ್ ಚೇತನಕ್ಕೆ ಈ ಬರಹ:

ಸ್ವಾಮಿ ವಿವೇಕಾನಂದರು ಭಾರತೀಯ ಸಂಸ್ಕೃತಿಯ ಪುನರುತ್ಥಾನದ ಹರಿಕಾರ, ವಾಗ್ಮಿ, ಶ್ರೇಷ್ಠ ಸನ್ಯಾಸಿ. ಇವರ ಪುರ್ವಾಶ್ರಮದ ಹೆಸರು ನರೇಂದ್ರನಾಥದತ್ತ. ಇವರು ಕೊಲ್ಕೊತ್ತದಲ್ಲಿ 1863 ಜನವರಿ 12 ರಂದು ಜನಿಸಿದರು. ಇವರ ತಂದೆ ವಿಶ್ವನಾಥದತ್ತ, ಹೈಕೋರ್ಟಿನ ಅಟಾರ್ನಿಯಾಗಿದ್ದರು. ಪಾರ್ಸಿ, ಇಂಗ್ಲಿಷ್ ಸಾಹಿತ್ಯ, ಸಂಗೀತದಲ್ಲಿಯೂ ಅಭಿರುಚಿಯುಳ್ಳವರಾಗಿದ್ದರು. ತಾಯಿ ಭುವನೇಶ್ವರೀದೇವಿ, ದೈವಭಕ್ತೆ, ವೀರನಾರಿ. ನರೇಂದ್ರರಿಗೆ 21 ವರ್ಷ ವಯಸ್ಸಾಗಿದ್ದಾಗ ತಂದೆ ನಿಧನರಾದರು.

ಬಾಲ್ಯದಲ್ಲಿ ಬಹಳ ತುಂಟತನ, ಆಟಪಾಠಗಳಲ್ಲಿ, ಗರಡಿ ಸಾಧನೆಗಳಲ್ಲಿ ಇವರು ನಿಸ್ಸಿಮರು, ಸೊಗಸಾದ ಗಾಯಕರು, ನಿರ್ಭಯ ಪ್ರವೃತ್ತಿ, ಎಲ್ಲವನ್ನೂ ಪ್ರಶ್ನಿಸುವ ಮನೋಧರ್ಮ ಬಹಿರಂಗದಲ್ಲಿ ಒರಟಾಗಿ ಕಂಡರೂ ಅಂತರಂಗ ಅತಿ ಕೋಮಲ. ಬಡವರಿಗೆ ಕೈಗೆ ಸಿಕ್ಕಿದ್ದನ್ನು ದಾನ ಮಾಡಿಬಿಡುವ ಉದಾರಿ, ಕಾಲೇಜಿನ ದಿನಗಳಲ್ಲಿ ಹಿಂದೂ ಧರ್ಮದ ಸುಧಾರಣೆಗೆ ಸ್ಥಾಪಿತವಾಗಿದ್ದ ಬ್ರಹ್ಮ ಸಮಾಜ ಸೇರಿ ಗಾನಗೋಷ್ಠಿಯ ಮುಂದಾಳುವಾಗಿದ್ದರು. ತರಗತಿಯಲ್ಲಿ ವರ್ಡ್ಸ್‌ವರ್ಥ್ ಕವಿಯ ಅನುಭವ ಗೀತೆಗಳನ್ನು ಹೆಚ್ಚು ಚೆನ್ನಾಗಿ ಗ್ರಹಿಸಬೇಕಾದರೆ ದಕ್ಷಿಣೇಶ್ವರದ ರಾಮಕೃಷ್ಣರನ್ನು ನೋಡಿ ಬರಬೇಕೆಂದು ಇವರ ಗುರು ಹೇಸ್ಟಿಯವರು ಸೂಚನೆ ಕೊಟ್ಟ ದಿನದಿಂದ ರಾಮಕೃಷ್ಣರ ಭೇಟಿಗೆ ಕಾತುರರಾಗಿದ್ದರು. ಇವರೇ ಹೇಳಿಕೊಂಡಿರುವಂತೆ ಆರು ವರ್ಷಗಳ ಕಾಲ ರಾಮಕೃಷ್ಣರೊಂದಿಗೆ ವಿಚಾರಮಥನಗಳನ್ನು ಮಾಡಿದ ಮೇಲೆ ಆಧ್ಯಾತ್ಮಿಕ ಮಾರ್ಗದ ಪ್ರತಿಯೊಂದು ಹೆಜ್ಜೆಯೂ ಇವರಿಗೆ ಸ್ಪಷ್ಟವಾಯಿತು.

ವಿದ್ಯಾಭ್ಯಾಸ ಮುಗಿದ ನಂತರ ಆಧ್ಯಾತ್ಮ ಸಾಧನೆಯಲ್ಲಿ ಬಲವಾದ ಅಕಾಂಕ್ಷೆ ಇದ್ದರೂ ತಂದೆಯ ಮರಣ ಕುಟುಂಬಕ್ಕೆ ತಂದ ಸಂಕಷ್ಟಗಳಿಂದ ನೌಕರಿ ಸೇರಬೇಕಾದ ಪರಿಸ್ಥಿತಿಯೊದಗಿತು. ತನಗೊದಗಿದ ಸತ್ವ ಪರೀಕ್ಷೆಯ ಕಠಿಣ ಪರಿಸ್ಥಿತಿಯಲ್ಲಿ, ವಿಗ್ರಹಾರಾಧನೆಯಲ್ಲಿ ನಂಬಿಕೆ ಇಲ್ಲದಿದ್ದರೂ ಗುರುಗಳ ಸಲಹೆಯಂತೆ ಗುರುಗಳ ಆರಾಧ್ಯದೈವವಾದ ಭವತಾರಿಣಿಯ ಪ್ರಾರ್ಥನೆ ಮಾಡಬೇಕಾಯಿತು. ಆಗಲೂ ಸಂಸಾರದ ಕಷ್ಟ ನೀಗಬೇಕೆಂದು

ಬೇಡದೆ ಜ್ಞಾನ–ಭಕ್ತಿ–ವೈರಾಗ್ಯಗಳನ್ನು ಬೇಡಿಕೊಳ್ಳುತ್ತಾರೆ. ಇಂತಹ ಪ್ರಸಂಗಗಳು ವಿವೇಕಾನಂದರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತವೆ.

1886ರಲ್ಲಿ ಶ್ರೀ ರಾಮಕೃಷ್ಣರು ನಿಧನರಾದ ಅನಂತರ ಇವರು ಹಾಗೂ ಇವರ ಸಹಪಾಠಿಗಳು ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿ ಗುರುಗಳ ಉಪದೇಶದಂತೆ ಆತ್ಮೋದ್ಧಾರವನ್ನೂ ಲೋಕಕಲ್ಯಾಣವನ್ನೂ ಸಾಧಿಸುವ ಸಂಕಲ್ಪ ಮಾಡಿದರು. ರಾಮಕೃಷ್ಣರ ಚಿತಾಭಸ್ಮ ಪಾತ್ರೆ ಹಾಗೂ ಗುರುಗಳ ಚಿತ್ರಪಟ ಇಷ್ಟೇ ಆಸ್ತಿಯನ್ನು ಹಿಡಿದು, ಧ್ಯಾನ, ಅಧ್ಯಯನ, ಭಜನೆ, ಭಿಕ್ಷೆ, ಕಠಿಣ ವ್ರತಗಳಲ್ಲಿ ನಿರತರಾಗಿ ತೀರ್ಥಯಾತ್ರೆ, ತಪಸ್ಸುಗಳಲ್ಲಿ ನಿರತರಾದರು. 1890 ರಿಂದ ಸುಮಾರು ಎರಡು ವರ್ಷಗಳವರೆಗೆ ಇಡೀ ಭಾರತ ದೇಶದ ಸಂಚಾರ ಕೈಗೊಂಡು ಅಸಾಧಾರಣ ಪ್ರತಿಭೆ ಮತ್ತು ವ್ಯಕ್ತಿತ್ವಗಳಿಂದ ಪಂಡಿತ ವರ್ಗದವರೊಂದಿಗೆ, ಸಾಮಾನ್ಯರೊಂದಿಗೆ, ಪ್ರತಿಭಾವಂತರೊಂದಿಗೆ ವಿಚಾರ ವಿನಿಮಯ ಮಾಡುತ್ತ ತಮ್ಮ ಪ್ರಭಾವವನ್ನು ಅವರ ಮೇಲೆ ಬೀರುತ್ತಾ ಬದುಕಿದರು. ಇವರಿಗೆ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಪ್ರಕಾಂಡ ಪಾಂಡಿತ್ಯವಿತ್ತು. ಹೀಗೆ ಲೋಕ ಸಂಚಾರ ಕೈಗೊಂಡಾಗ ಏರ್ಪಟ್ಟ ಲೋಕಮಾನ್ಯ ತಿಲಕರ ಭೇಟಿ ಹಾಗೂ ಖೇತ್ರಿಮಹಾರಾಜರು ಇವರ ಶಿಷ್ಯರಾದದ್ದು ಇವರ ಜೀವನಕ್ಕೇ ಒಂದು ಹೊಸ ತಿರುವು ನೀಡಿತು. ಬೇರೆ ಬೇರೆ ಹೆಸರುಗಳನ್ನು ಹೇಳಿಕೊಂಡು ಓಡಾಡುತ್ತಿದ್ದ ಇವರಿಗೆ ವಿವೇಕಾನಂದ ಎಂಬ ಹೆಸರನ್ನಿಟ್ಟವರು ಹಾಗು ಇವರು ಅಮೆರಿಕಕ್ಕೆ ಪ್ರವಾಸ ಕೈಗೊಳ್ಳುವಂತೆ ಪ್ರಚೋಚಿಸಿದವರು ಈ ಮಹಾರಾಜರೆ ಇವರ ಪ್ರತಿಭೆ ಮೈಸೂರು ಮಹಾರಾಜರಾಗಿದ್ದ ಚಾಮರಾಜ ಒಡೆಯರನ್ನು ಮಂತ್ರಮುಗ್ಧರನ್ನಾಗಿಸಿ ಇವರ ವಿದೇಶ ಪ್ರವಾಸಕ್ಕೆ ಅವರು ನೆರವು ನೀಡುವಂತಾಯಿತು.

1893 ರಲ್ಲಿ ಶಿಕಾಗೊ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಜಪಾನ್ ಮಾರ್ಗವಾಗಿ ಪ್ರಯಾಣ ಕೈಗೊಂಡರು. ಇವರು ದೇಶೋದ್ಧಾರ, ವೇದಾಂತ ಪ್ರಚಾರ ಇವುಗಳಿಗೆ ಜೀವನವನ್ನು ಮುಡುಪಾಗಿಡಬೇಕೆಂಬ ಸಂಕಲ್ಪ ಮಾಡಿದರು. ಸಮ್ಮೇಳನದಲ್ಲಿ ಸಭೆಯನ್ನುದ್ದೇಶಿಸಿ ಆಡಿದ ಇವರ ಮಾತುಗಳು. ಇವರ ವಿಶಿಷ್ಟವಾದ ಪ್ರತಿಭೆ. ಮೇಧಾಶಕ್ತಿ. ಪ್ರತಿಪಾದನಾ ಕೌಶಲ್ಯಗಳನ್ನು ಜಗತ್ತಿಗೇ ಪರಿಚಯಿಸಿದವು. ಅಲ್ಲಿ ಇವರಿಗೆ ದೊರೆತ ಯಶಸ್ಸು ಭಾರತೀಯರ ಹೆಮ್ಮೆಯ ವಿಷಯವಾಯಿತು. ಭಾರತದ ನವ ನಿರ್ಮಾಣದಲ್ಲಿ ಅಂದಿನಿಂದ ಇವರೊಬ್ಬ ಯುಗಪುರುಷರಾಗಿ ಪರಿಗಣಿತರಾದರು. ಅಲ್ಲಿಂದ ಮುಂದೆ ವಿಶ್ವದಾದ್ಯಂತ ಇವರ ಪ್ರವಚನಗಳು ಏರ್ಪಟ್ಟವು. ವಿಚಾರಗೋಷ್ಠಿಗಳೂ, ಅಧ್ಯಯನ ಕೇಂದ್ರಗಳೂ ರೂಪ ತಾಳಿದವು. ನ್ಯೂಯಾರ್ಕಿನ ವೇದಾಂತ ಸೊಸೈಟಿ ರೂಪ ತಳೆದದ್ದು ಇವರ ಪ್ರಭಾವದಿಂದಲೇ. 'ಕರ್ಮಯೋಗ' 'ಭಕ್ತಿಯೋಗ' 'ರಾಜಯೋಗ' 'ಸ್ಫೂರ್ತಿದಾಯಕ ಮಾತುಗಳು" – ಇವು ಈ ಬಗೆಯ ಪ್ರವಚನ, ಉಪನ್ಯಾಸಗಳನ್ನೊಳಗೊಂಡ ಇವರ ಕೆಲವು

ಮುಖ್ಯ ಕೃತಿಗಳಾಗಿವೆ. ವೇದಾಂತದ ತತ್ವಗಳನ್ನು ಆಧುನಿಕ ವಿಚಾರ ಧೋರಣೆಗೆ ಒಗ್ಗುವಂತೆ ಯುಕ್ತವಾಗಿ ಪ್ರತಿಪಾದಿಸಿದ್ದು ಇವರು ಸನಾತನ ಧರ್ಮಕ್ಕೆ ಮಾಡಿದ ಮಹತ್ತ್ವದ ಸೇವೆಯಾಗಿದೆ.

ನಿಜವಾದ ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಕೂಡಿದ ಸಾತ್ವಿಕ ಜೀವನ ನಡೆಸುವುದು. ಆಧ್ಯಾತ್ಮಿಕ ವಿಷಯದಲ್ಲಿ ಜನರಿಗೆ ಒಲವು. ಮೂಡಿಸುವುದು, ಸಾಧನೆ ಕೈಗೊಳ್ಳುವವರಿಗೆ ಆಸನ, ಪ್ರಾಣಾಯಾಮ, ಧ್ಯಾನ ಮೊದಲಾದವನ್ನು ಬೋಧಿಸುವುದು. ಇವರ ಮುಖ್ಯ ಕಾರ್ಯವಾಗಿತ್ತು. ಅಮೇರಿಕದ ಶಿಕ್ಷಿತ ವರ್ಗದಲ್ಲಿ ವಿಚಾರಕ್ರಾಂತಿಯುಂಟು ಮಾಡಿದ್ದು, ಇವರ ಹೆಗ್ಗಳಿಕೆ. ಆದ್ದರಿಂದಲೇ ಭಾರತವನ್ನು ಬಿಟ್ಟರೆ ರಾಮಕೃಷ್ಣ ಮಠಗಳು ಧ್ಯಾನ್ಯಕೇಂದ್ರಗಳು ಹೆಚ್ಚು ಸಂಖ್ಯೆಯಲ್ಲಿರುವುದು ಅಮೇರಿಕದಲ್ಲಿಯೆ. ಇವರು ತಮ್ಮ ಆಪ್ತರಿಗೆ ಧಾರ್ಮಿಕ ವಿಷಯವಾಗಿ ಬರೆದಿರುವ ಅಸಂಖ್ಯಾತ ಪತ್ರಗಳೂ ಕೂಡ ಅಪೂರ್ವ ಸಾಹಿತ್ಯವಾಗಿದೆ. ಇವರಿಗೆ ಭಾರತ ಮತ್ತು ಭಾರತೀಯ ಧರ್ಮಗಳ ವಿಷಯದಲ್ಲಿದ್ದ ಧರ್ಮಗಳ ವಿಷಯದಲ್ಲಿದ್ದ ಅಸಾಧಾರಣ ಪ್ರೇಮ, ಅಭಿಮಾನಗಳು ಈ ಪತ್ರಗಳಿಂದ ತಿಳಿಯುತ್ತದೆ.

1895 ರಲ್ಲಿ ವಿದೇಶದಲ್ಲಿ ವೇದಾಂತ ಪ್ರಚಾರ ಕೈಗೊಂಡ ಸಂದರ್ಭದಲ್ಲಿ ಮಾರ್ಗರೆಟ್ ನೊಬೆಲ್ ಎಂಬ ಆಂಗ್ಲ ಮಹಿಳೆ ಇವರನ್ನು ಸಂದರ್ಶಿಸಿ, ಶಿಷ್ಯೆಯಾಗಿ ಭಾರತಕ್ಕೆ ಬಂದು ಉತ್ತಮ ಸೇವೆ ಸಲ್ಲಿಸಿ ನಿವೇದಿತಾ ಎಂಬ ಹೆಸರಿನಿಂದ ಪ್ರಸಿದ್ಧಳಾದದ್ದು ಒಂದು ಐತಿಹಾಸಿಕ ದಾಖಲೆಯಾಗಿದೆ. 'ಕೊಲಂಬೋವಿನಿಂದ ಆಲ್ಮೋರವರೆಗೆ' ಎಂಬ ಗ್ರಂಥ ಉತ್ತರ ಭಾರತದ ಅನೇಕ ನಗರಗಳಿಗೆ ಇವರ ಭೇಟಿ ನೀಡಿ ವೇದಾಂತಕ್ಕಿಂತ ಹೆಚ್ಚಾಗಿ ದೇಶಾಭ್ಯುದಯಕ್ಕಾಗಿ ನೀಡಿದ ಸ್ಫೂರ್ತಿಯುತ ಭಾಷಣಗಳನ್ನು ಒಳಗೊಂಡಿದೆ.

1987 ರಿಂದ ಹಲವು ವರ್ಷಗಳು ಅವಿಶ್ರಾಂತವಾಗಿ ದುಡಿದು ದೇಶದ ಹಲವಾರು ಕಡೆಗಳಲ್ಲಿ ಮೋಕ್ಷಕ್ಕೂ ಪ್ರಪಂಚದ ಹಿತಕ್ಕೂ ಶ್ರಮಿಸುವ ಪ್ರಮುಖ ಧ್ಯೇಯವುಳ್ಳ ರಾಮಕೃಷ್ಣ ಮಠ ಮತ್ತು ಮಿಷನ್‌ಗಳನ್ನು ವಿಧಿವತ್ತಾಗಿ ಸ್ಥಾಪಿಸಿದರು. ಅವಿಶ್ರಾಂತ ದುಡಿಮೆಯಿಂದ ಜರ್ಝರಿತರಾಗಿದ್ದ ಇವರು 1982 ಜುಲೈ 4 ರಂದು ನಿಧನರಾದರು.

ಬಾಬು:ಜಿಪಿಆರ್:ಕೆಎಂ